Reg. No. | | | | | | | | | |

**. BCMKAL 153**

**Credit Based II Semester B.Com. Degree Examination, April/May 2015**
**(2013-14 Batch and Onwards)**
**KANNADA LANGUAGE**
**Kannada Bhasha Patrike – II**

Time : 3 Hours  Max. Marks : 80

ಭಾಗ – 1 (ಕಾವ್ಯ)

I. ಅ) **ಒಂದು** ಪ್ರಶ್ನೆಗೆ ವಿವರಣಾತ್ಮಕವಾಗಿ ಉತ್ತರಿಸಿರಿ : **(1×8=8)**

1) ಮಹಾಶ್ವೇತೆ – ಪುಂಡರೀಕ ಪ್ರಥಮ ಭೇಟಿಯ ಸ್ವಾರಸ್ಯವನ್ನು ಕಾವ್ಯ ಭಾಗದ ಆಧಾರದಿಂದ ಸಂಗ್ರಹಿಸಿ ಬರೆಯಿರಿ.

2) ಮಾದಾರ ಚೆನ್ನಯ್ಯನ ಗುಪ್ತ ಭಕ್ತಿಯನ್ನು ಶಿವ ಪ್ರಕಟಗೊಳಿಸಿದ ಬಗೆಯನ್ನು ವಿವರಿಸಿರಿ.

ಆ) **ಒಂದು** ಪ್ರಶ್ನೆಗೆ ಸಂಕ್ಷಿಪ್ತವಾಗಿ ಉತ್ತರಿಸಿರಿ : **(1×5=5)**

1) ''ಗಿಳಿಯು ಪಂಜರದೊಳಿಲ್ಲ'' ಒಂದು ಶೋಕ ನಿವೇದನೆಯ ಕೀರ್ತನೆ – ಸಮರ್ಥಿಸಿ.

2) ಉತ್ತರಾದೇವಿ ಅತ್ತೆ ಮನೆಯನ್ನು ಬಿಟ್ಟು ಹೊರಟು ಹೋದ ಸನ್ನಿವೇಶವನ್ನು ಕುರಿತು ಬರೆಯಿರಿ.

ಇ) **ಎರಡರ** ಬಗ್ಗೆ ಟಿಪ್ಪಣಿ ಬರೆಯಿರಿ : **(2×3=6)**

1) ಸರ್ವಜ್ಞ

2) ಸಿನಿಮಾ ಹಾಡುಗಳು

3) ಜನಪದ ಗೀತೆ

II. ಅ) **ಒಂದು** ಪದ್ಯದ ಸಂದರ್ಭ ಸೂಚಿಸಿ ಭಾವವನ್ನು ವಿವರಿಸಿರಿ : **(1×5=5)**

1) ಆ ದೆಸೆಯಿಂ ಬರ್ಪೆಲರುಮ
ನಾ ದೆಸೆಯಿಂದೆಸೆವ ಕುಸುಮ ಪರಿಮಳಮುಮನಂ
ತಾ ದೆಸೆಯಿನೆಸೆವ ವಿಹಗನಿ
ನಾದಮುಮಂ ವಾರ್ತೆಗೇಳಲಾನೊಡರಿಸಿದೆಂ

2) ಬೃಂದಾವನದ ಚಿತ್ರ ಇನ್ನೂ ವಿಚಿತ್ರ. ಎಲೆ ಮನೆಗಳೆಲ್ಲಾ
ಆಗಿ ನಿರ್ನಾಮ ಮೇಲೆದ್ದಿದ್ದವಲ್ಲಿ ಗಾರೆಗಚ್ಚಿನ
ಮುಗಿಲೆತ್ತರದ ಮಹಡಿ. ಕಾಡುಗಳ ಸವರಿ ನಾಡ ವಿಸ್ತರಣೆ
ನಡೆದೇ ಇತ್ತು ಹಗಲೂ ಇರುಳು. ಕಪ್ಪಾಗಿತ್ತೀಗ ಸ್ಫಟಿಕ ನಿರ್ಮಲ
ಯಮುನಾ ಜಲ ಗುರುತೇ ಸಿಕ್ಕುವಂತಿರಲಿಲ್ಲ ಗೋಪಿಯರು.

P.T.O.

ಆ) **ಎರಡು** ಸಾಲುಗಳ ಸಂದರ್ಭ ಸ್ವಾರಸ್ಯ ಬರೆಯಿರಿ : (2×3=6)

1) ನಿನ್ನಂತೆ ವಿಗತಚಿತ್ತರುಮೊಳರೇ.

2) ಜಾತಿಹೀನರ ಮನೆಯ ಜ್ಯೋತಿ ತಾ ಹೀನವೇ.

3) ತೇಯುತಲಿದ್ದರು ಗಂಧದ ಪರಿಮಳ ತುಂಬಿ ಬರುವುದು.

III. ಕೆಳಗಿನ ಪ್ರಶ್ನೆಗಳಿಗೆ **ಒಂದೊಂದು** ವಾಕ್ಯದಲ್ಲಿ ಉತ್ತರಿಸಿರಿ : (5×1=5)

1) ಪುಂಡರೀಕನ ಗೆಳೆಯನ ಹೆಸರೇನು ?

2) ಹರಿಹರನ ಚಂಪೂ ಕಾವ್ಯ ಯಾವುದು ?

3) ರಾಮನ ಬಾಲ್ಯ ಅರಳಿದ್ದು ಎಲ್ಲಿ ?

4) 'ಈ ಭೂಮಿ ಬಣ್ಣದ ಬುಗುರಿ' – ಈ ಹಾಡಿನ ಕವಿ ಯಾರು ?

5) ಸರ್ವಜ್ಞ ತನ್ನ ಕಾವ್ಯ ರಚನೆಗೆ ಬಳಸಿದ ಛಂದಸ್ಸು ಯಾವುದು ?

## ಭಾಗ– 2 (ಗದ್ಯ)

IV. ಅ) **ಒಂದು** ಪ್ರಶ್ನೆಗೆ ವಿವರಣಾತ್ಮಕವಾಗಿ ಉತ್ತರಿಸಿರಿ : (1×8=8)

1) ''ಸ್ವತಂತ್ರ ಚಿಂತನೆಯಿಂದ ಸತ್ಯದ ದರ್ಶನವಾಗುತ್ತದೆ'' ಕುವೆಂಪುರವರ ಈ ಅಭಿಪ್ರಾಯವನ್ನು ವಿವರಿಸಿರಿ.

2) ಅಕ್ಷರ ಸಂತ ಹರೇಕಳ ಹಾಜಬ್ಬರ ಪ್ರಾಮಾಣಿಕ ಪರಿಶ್ರಮದ ಯಥಾವತ್ತಾದ ಚಿತ್ರ ಲೇಖನದಲ್ಲಿ ಹೇಗೆ ಮೂಡಿ ಬಂದಿದೆ ? ವಿವರಿಸಿರಿ.

ಆ) **ಒಂದು** ಪ್ರಶ್ನೆಗೆ ಪ್ರಬಂಧದ ಹಿನ್ನೆಲೆಯಲ್ಲಿ ಉತ್ತರಿಸಿರಿ : (1×8=8)

1) ಸುದೀಪ್ ದತ್ತಾರ ಬದುಕಿನ ಸಕ್ಸಸ್ ಸ್ಟೋರಿಯನ್ನು ಸಂಗ್ರಹಿಸಿ ಕೊಡಿ.

2) ಲೇಖಕರು ಹೇಳುವಂತೆ ಕನ್ನಡ ಕವಿಗಳ ರಸಿಕತೆಯ ಮಾತುಗಳನ್ನು ವಿವರಿಸಿರಿ.

V. **ಒಂದು** ಪ್ರಶ್ನೆಗೆ ವಿಶ್ಲೇಷಣಾತ್ಮಕ ಟಿಪ್ಪಣಿ ಬರೆಯಿರಿ : (1×5=5)

1) ಮಹಿಳಾ ಶೋಷಣೆಯ ವಿಮೋಚನೆಗೆ ಲೇಖಕಿ ಹೇಳುವ ಮಾರ್ಗವನ್ನು ವಿವೇಚಿಸಿ.

2) ''ಬದುಕು ಕಲಿಸುವ ಪಾಠವನ್ನು ಯಾವ ವಿಶ್ವ ವಿದ್ಯಾನಿಲಯವೂ ಕಲಿಸುವುದಿಲ್ಲ''. ಎ. ಆರ್. ಮಣಿಕಾಂತ್ ಅವರ ಮಾತನ್ನು ವಿವೇಚಿಸಿ.

VI. ಒಂದು ವಾಕ್ಯದಲ್ಲಿ ಉತ್ತರಿಸಿರಿ : (1×4=4)

1) 'ಶ್ರೀ ರಾಮಾಯಣ ದರ್ಶನಂ' ಇದಕ್ಕೆ ಯಾವ ಪ್ರಶಸ್ತಿ ದೊರೆತಿದೆ ?

2) ಹಾಜಬ್ಬರ 'ಇಸಂ' ಯಾವುದು ?

3) ''ಗ್ಲಿಂಪ್ಸಸ್ ಆಫ್ ವರ್ಲ್ಡ್ ಹಿಸ್ಟರಿ'' ಕೃತಿಯ ಲೇಖಕರು ಯಾರು ?

4) ''ಚೆಂಬೆಳಕಿನ ಕವಿ'' ಎಂದು ಯಾರನ್ನು ಕರೆಯುತ್ತಾರೆ ?

## ಭಾಗ – 3 (ನಾಟಕ)

VII. ಅ) ಒಂದು ಪ್ರಶ್ನೆಗೆ ವಿವರಣಾತ್ಮಕವಾಗಿ ಉತ್ತರಿಸಿರಿ : (1×8=8)

1) ಜಿನೇಂದ್ರ ಪರಿನಿಷ್ಕ್ರಮಣಕ್ಕೆ ಸಂದ ಬಗೆಯನ್ನು ಕುರಿತು ಬರೆಯಿರಿ.

2) ದೇವದತ್ತನ ಏಕಮುಖ ಪ್ರಣಯ ಪ್ರಸಂಗವನ್ನು ಕುರಿತು ಬರೆಯಿರಿ.

ಆ) ಒಂದು ಪ್ರಶ್ನೆಗೆ ಸಂಕ್ಷಿಪ್ತವಾಗಿ ಉತ್ತರಿಸಿರಿ : (1×6=6)

1) ಭರತ – ಬಾಹುಬಲಿಯರ ನಡುವೆ ನಡೆದ ಯುದ್ಧ ಮತ್ತು ಅದರ ಪರಿಣಾಮಗಳನ್ನು ಬರೆಯಿರಿ.

2) ನಾಟಕದಲ್ಲಿ ಸೂತ್ರಧಾರ ಹಾಗೂ ನಟಿ ಪಾತ್ರಗಳ ಔಚಿತ್ಯದ ಬಗ್ಗೆ ಬರೆಯಿರಿ.

VIII. ಎರಡು ಸಾಲುಗಳಿಗೆ ಸಂದರ್ಭ ಸೂಚಿಸಿ ಸ್ವಾರಸ್ಯ ಬರೆಯಿರಿ : (2×2=4)

1) ಭಯೋತ್ಪಾದನೆಗೆ ಹೆದರುವವರು ಹೆದರುತ್ತಾರೆ.

2) ಇದು ಪಂದ್ಯವಲ್ಲ, ಯುದ್ಧ.

3) ಯುದ್ಧದ ಆಲೋಚನೆಯೇ ಮನುಕುಲಕ್ಕೆ ಮಾರಕವಾಗುತ್ತದೆ.

IX. ಒಂದು ವಾಕ್ಯದಲ್ಲಿ ಉತ್ತರಿಸಿರಿ : (2×1=2)

1) ಬಿ. ಸಿದ್ಧಲಿಂಗಯ್ಯ ಕಂಬಾಳು ಅವರ ಕಾವ್ಯನಾಮವೇನು ?

2) ಇಂದ್ರ ದೇವನು ಜಿನೇಂದ್ರನಿಗೆ ಸಲ್ಲಿಸಿದ ದೃಶ್ಯ ಕಾಣಿಕೆ ಯಾವುದು ?

---